ಎನ್. ಜಯದೇವ್
ಕಾರ್ಯದರ್ಶಿ
**N. Jayadev**
Secretary

ದೂರವಾಣಿ : ಕಛೇರಿ : ೨೨೩೭೧೯೫೯
TELEPHONE : OFF : 22371959

**ಕರ್ನಾಟಕ ಮಾಹಿತಿ ಆಯೋಗ**
ಗೇಟ್-೨, ಕೊಠಡಿ ಸಂಖ್ಯೆ : ೩೩೩
ಬಹುಮಹಡಿಗಳ ಕಟ್ಟಡ, ಬೆಂಗಳೂರು - ೫೬೦ ೦೦೧
**Karnataka Information Commission**
Gate-2, Room No. 333, 3rd Floor
Multistoried Building
Bangalore - 560 001
e-mail : secy-kic@karnataka.gov.in

ದಿನಾಂಕ/ Dated 27/4/2012

ಇವರಿಗೆ:

ಸಂಪಾದಕರು,
ಕನ್ನಡ ಪ್ರಭ ದಿನ ಪತ್ರಿಕೆ.
ಕ್ವೀನ್ಸ್ ರೋಡ್, ಬೆಂಗಳೂರು-560001

ಮಾನ್ಯರೆ,

ವಿಷಯ: 27/04/2012 ರಂದು ತಮ್ಮ ದಿನ ಪತ್ರಿಕೆಯ ಪುಟ 3ರಲ್ಲಿ ಪ್ರಕಟಿಸಿರುವ *"ಜನರೇ ಬುದ್ಧಿ ಕಲಿಸಬೇಕು. ಆರ್‌ಟಿಐ ದುರ್ಬಳಕೆ: ಮಾಹಿತಿ ಹಕ್ಕು ಆಯುಕ್ತ ನಾಯಕ್ ಅಭಿಮತ"- ಬಗ್ಗೆ*

\#########

ದಿನಾಂಕ 27/04/2012 ರಂದು ಪ್ರಕಟವಾಗಿರುವ ತಮ್ಮ ದೈನಂದಿನ ಪತ್ರಿಕೆಯ ಪುಟ 3ರಲ್ಲಿ *"ಜನರೇ ಬುದ್ಧಿ ಕಲಿಸಬೇಕು. ಆರ್.ಟಿ.ಐ ದುರ್ಬಳಕೆ: ಮಾಹಿತಿ ಹಕ್ಕು ಆಯುಕ್ತ ನಾಯಕ್ ಅಭಿಮತ"* ಎಂಬ ಶೀರ್ಷಿಕೆಯಲ್ಲಿ ಒಂದು ಲೇಖನವನ್ನು ಶ್ರೀ ಶಿವಕುಮಾರ್ ಬೆಳ್ಳಿತಟ್ಟೆಯವರು ಬರೆದಿರುತ್ತಾರೆ. ಆ ಲೇಖನದಲ್ಲಿ "ಆಯುಕ್ತರಾದ ನಾಯಕ್ ರವರನ್ನು ಸಂಪರ್ಕಿಸಿದಾಗ ಅವರು ಹೇಳಿದ್ದು ಹೀಗೆ" ಎಂದು ಪ್ರಕಟವಾಗಿದೆ.

ಕರ್ನಾಟಕ ರಾಜ್ಯ ಮುಖ್ಯ ಮಾಹಿತಿ ಆಯುಕ್ತರಾದ ಶ್ರೀ ಎ.ಕೆ.ಎಂ ನಾಯಕ್ ರವರು ತಮ್ಮನ್ನು ಯಾರೂ ನೇರವಾಗಿ ಸಂಪರ್ಕಿಸಿಲ್ಲವೆಂದು ಹಾಗೂ ತಾವು ಯಾರಿಗೂ ಮೇಲ್ಕಂಡ ವಿಷಯದ ಬಗ್ಗೆ ಮಾತನಾಡಿರುವುದಿಲ್ಲವೆಂದು ಹಾಗೂ ಲೇಖಕರನ್ನು ಭೇಟಿಯೇ ಆಗಿಲ್ಲವೆಂದು ತಿಳಿಸಿರುತ್ತಾರೆ.

ದಿನಾಂಕ 23/04/2012 ರಂದು ಲೇಖಕರ ಹೆಸರಿನಲ್ಲಿ ಒಬ್ಬರು ಮುಖ್ಯ ಮಾಹಿತಿ ಆಯುಕ್ತರ ಆಪ್ತ ಶಾಖೆಗೆ ದೂರವಾಣಿ ಕರೆ ಮಾಡಿ ಅವರ ದೂರವಾಣಿ /ಸೆಲ್‌ನ ನಂಬರ್‌ಗಳನ್ನು ಕೇಳಿರುತ್ತಾರೆ. ಆದರೆ ಈ ಸಂದರ್ಭದಲ್ಲಿ ಆಪ್ತ ಶಾಖೆಯಿಂದ ದೂರವಾಣಿಯ ಯಾವುದೇ ನಂಬರ್ ಕೊಟ್ಟಿರುವುದಿಲ್ಲ. ಮಾನ್ಯ ಮುಖ್ಯ ಆಯುಕ್ತರು ಸಹ ಯಾವುದೇ ಪತ್ರಕರ್ತರೊಡನೆ ನೇರವಾಗಿ ಆಗಲಿ ಅಥವಾ ದೂರವಾಣಿ ಮುಖಾಂತರವಾಗಲಿ ಮಾತನಾಡಿರುವುದಿಲ್ಲ. ಪತ್ರಿಕೆಯಲ್ಲಿರುವ ದಿನಾಂಕ 27/04/2012ರ ವರದಿಗೂ ಹಾಗೂ ಅವರಿಗೂ ಯಾವುದೇ ಸಂಬಂಧವಿರುವುದಿಲ್ಲ ಎಂದು ಹೇಳಿರುತ್ತಾರೆ. ಆದ ಕಾರಣ ಈ ಬಗ್ಗೆ ಸ್ಪಷ್ಟೀಕರಣವನ್ನು ಪ್ರಕಟಿಸಲು ಕೋರುವಂತೆ ನಿರ್ದೇಶಿತನಾಗಿರುತ್ತೇನೆ.

ವಂದನೆಗಳೊಂದಿಗೆ.

27/04/12

Jayadev
ಕಾರ್ಯದರ್ಶಿಗಳು
ಕರ್ನಾಟಕ ಮಾಹಿತಿ ಆಯೋಗ